**ಸಿ.ಸಿ. ನಂ. 25336/2023**

ಡಿ.ಡಬ್ಲ್ಯೂ.1

**<u>ದಿನಾಂಕಃ 03.07.2026ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

| | |
|---|---|
| ಸಾಕ್ಷಿಯ ಹೆಸರು | ಶಿವಕುಮಾರ್ |
| ಗಂಡನ/ತಂದೆಯ ಹೆಸರು | ವೆಂಕಟೇಶ್ |
| ವಯಸ್ಸು | 36 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಾಸಸ್ಥಳ | ಬನಶಂಕರಿ 3ನೇ ಹಂತ, ಬೆಂಗಳೂರು. |

**<u>ಮುಖ್ಯ ವಿಚಾರಣೆಃ ಶ್ರೀ. ಆರೋಪಿ ಪರ ವಕೀಲರಿಂದ</u>**

ನಾನು 2019ರಲ್ಲಿ ದೂರುದಾರರ ಸಂಸ್ಥೆಯಲ್ಲಿ ಚೀಟಿ ಹಾಕಿದ್ದೆನು, ಜನವರಿ 2020ರಲ್ಲಿ ರೂ. 16,25,000/- ಕ್ಕೆ ಚೀಟಿ ಹಣ ಕೂಗಿದ್ದು, ಆದರೆ ನನ್ನ ಕೈಗೆ 15,50,000/- ರೂ.ಗಳನ್ನು ಮಾತ್ರ ಕೊಟ್ಟಿರುತ್ತಾರೆ. ಕೊನೆಯಲ್ಲಿ ಉಳಿಕೆ ಕಂತುಗಳನ್ನು ಕಟ್ಟುವಾಗ ಕಡಿತಗೊಳಿಸುತ್ತೇವೆಂದು ಹೇಳಿದ್ದರು. ಒಟ್ಟು 50 ತಿಂಗಳು, ಪ್ರತಿ ತಿಂಗಳು 35 ಸಾವಿರ ಕಟ್ಟಬೇಕಾಗಿತ್ತು, ಆದರೆ ಕೋವಿಡ್ ಬಂದ ಕಾರಣ ಕೆಲವು ಕಂತುಗಳು ಕಟ್ಟಲು ಆಗಿರುವುದಿಲ್ಲ. ನಂತರ ಪೂರ್ಣ ಹಣ ಕಟ್ಟಲು ಹೋದಾಗ 30 ರಿಂದ 40% ಬಡ್ಡಿ ಸೇರಿಸಿ ಕಟ್ಟಬೇಕೆಂದು ಹಣ ಕಟ್ಟಿಸಿಕೊಳ್ಳಲಿಲ್ಲ, ನಂತರ ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣದ ದಾಖಲಿಸಿರುತ್ತಾರೆ. ಜಾಮೀನುದಾರರಾಗಿ ಶೇಖರ್, ಸಿ ಬಿ ರಾಜು, ಬಾಬು, ವೆಂಕಟೇಶ್, ನೀಲಮ್ಮ ಹಾಗೂ ನಾನು ಸೇರಿದಂತೆ ಒಟ್ಟು 7 ಜನರ ಮೇಲೆ ಚಿಟ್ ಕಾಯ್ದೆ ಅಡಿ 18,75,000/-ಕ್ಕೆ ಸಿವಿಲ್ ಪ್ರಕರಣ ಮತ್ತು ಈ ಪ್ರಕರಣವನ್ನು 11,75,000/-ಕ್ಕೆ ದಾಖಲು ಮಾಡಿರುತ್ತಾರೆ. ನಾನು 37 ಕಂತುಗಳನ್ನು ಕಟ್ಟಿರುತ್ತೇನೆ, ಇನ್ನೂ 13 ತಿಂಗಳುಗಳು ಮಾತ್ರ ಕಟ್ಟಬೇಕಾಗಿರುತ್ತದೆ. ಹಾಗಾಗಿ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**(ಓ. ಹೇ. ಕೇ. ಸ)**

**(ಕೆ ಎಂ ಆನಂದ್)**
**36ನೇ ಎ.ಸಿ.ಜೆ.ಎಂ.,**
**ಬೆಂಗಳೂರು.**